**<u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ವಿರಾಜಪೇಟೆ.</u>**

**<u>ಸಿ.ಸಿ ನಂಬರ್ಃ 450/2023</u>**

**<u>ಪಿರ್ಯಾದಿ</u> :** ರಾಜ್ಯ, ಪರವಾಗಿ ಸಿದ್ದಾಪುರ
ಪೊಲೀಸರು, ವಿರಾಜಪೇಟೆ ತಾಲ್ಲೂಕು.

**<u>ವಿರುದ್ದ</u>**

**<u>ಆರೋಪಿ</u> :** ಶ್ರೀ ಕಾವೇರಪ್ಪ.ಕೆ,
ವಯಸ್ಸು ಸುಮಾರು 42 ವರ್ಷ,
ಬಿನ್ಃ ಪೌತಿ ಕರ್ಪಸ್ವಾಮಿ,
ವಾಸಃ ಚೆನ್ನಯ್ಯನಕೋಟೆ ಗ್ರಾಮ,
ವಿರಾಜಪೇಟೆ ತಾಲ್ಲೂಕು.

* * * * *

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿಯ ಹೇಳಿಕೆ</u>**

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ ಕೇಳಿದ್ದೇನೆ.

ಪ್ರಶ್ನೆಃ 2) ಪ್ರಾಸಾ1-ವಿ.ಬಿ.ಹರೀಶ್‌ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 11.04.2023 ರಂದು ಬೆಳಿಗ್ಗೆ ಸುಮಾರು 10.30 ಗಂಟೆಗೆ ಅವರು ಸದರಿ ಚೆನ್ನಯ್ಯನಕೋಟೆಯ ಉಪಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿಕೊಂಡಿರುವಾಗ ಚೆನ್ನಯ್ಯನಕೋಟೆ ಬಾತ್ಮೀದಾರರು ಕರೆ ಮಾಡಿ ಆರೋಪಿಯಾದ ಚೆನ್ನಯ್ಯನಕೋಟೆಯ ನಿಮ್ಮ ವಾಸದ ಮನೆಯ ಅಂಗಳದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ತಿಳಿಸಿದ ಮೇರೆಗೆ, ಸದರಿ ಮಾಹಿತಿಯ ಆಧಾರದ ಮೇಲೆ ಅವರು ಸ್ವ ವರದಿಯನ್ನು ತಯಾರಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 3) ಪ್ರಾಸಾ1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಸಿದ್ದಾಪುರ ಠಾಣೆಗೆ ಬಂದು ಚಾಸಾ8 ರವರಿಗೆ ಸದರಿ ವದಿಯನ್ನು ನೀಡಿದ ನಂತರ, ಅವರು ಸದರಿ ವರದಿಯ ಆಧಾರದ ಮೇಲೆ ಆರೋಪಿಯಾದ ನಿಮ್ಮ ವಿರುದ್ದ ಪ್ರಕರಣವನ್ನು ದಾಖಲಿಸಿರುತ್ತಾರೆ. ನಂತರ ಚಾಸಾ8 ರವರು ಅವರನ್ನು, ಚಾಸಾ-2

ಹಾಗೂ 3 ರವರನ್ನು ಕರೆದು ದಾಳಿಗೆ ಬರುವಂತೆ ತಿಳಿಸಿ, ಅವರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂದು ಠಾಣೆಯಿಂದ ಹೊರಟು ಸಿದ್ಧಾಪುರದ ಚೆನ್ನಯ್ಯನ ಕೋಟೆ ಬಸ್ ನಿಲ್ದಾಣಕ್ಕೆ ತೆರಳಿ ಅಲ್ಲಿ ಪಂಚರಾದ ಚಾಸಾ4 ಹಾಗೂ 5 ರವರನ್ನು ಬರಮಾಡಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 4) ಪ್ರಾಸಾ1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ8 ರವರು ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡ ಮೇರೆಗೆ ಅದಕ್ಕೆ ಅವರು ಒಪ್ಪಿಕೊಂಡ ನಂತರ ಚಾಸಾ8 ರವರು ಅವರನ್ನು ಹಾಗೂ ಚಾಸಾ4 ಹಾಗೂ 5 ರವರನ್ನು ಕರೆದುಕೊಂಡು ಚೆನ್ನಯ್ಯನಕೋಟೆ ಗ್ರಾಮದ ಆರೋಪಿಯಾದ ನಿಮ್ಮ ಮನೆಯ ಬಳಿ ಹೋಗಿ ಜೀಪನ್ನು ನಿಲ್ಲಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 5) ಪ್ರಾಸಾ1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಆರೋಪಿಯಾದ ನಿಮ್ಮ ಮನೆಯ ಬಳಿ ನಿಂತಿದ್ದು, ನಂತರ ಚಾಸಾ8 ರವರು ಆರೋಪಿಯಾದ ನಿಮಗೆ ಪ್ರಕರಣದ ವಿಚಾರವನ್ನು ತಿಳಿಸಿ ಮದ್ಯ ಮಾರಾಟದ ಬಗ್ಗೆ ವಿಚಾರಿಸಿದಾಗ ಆರೋಪಿಯಾದ ನೀವು ಮೊದಲು ಒಪ್ಪಿಕೊಂಡಿರುವುದಿಲ್ಲ. ನಂತರ ಪುನಃ ವಿಚಾರಿಸಿದಾಗ ಮದ್ಯ ಮಾರಾಟ ಮಾಡುತ್ತಿದ್ದ ವಿಚಾರವನ್ನು ಆರೋಪಿಯಾದ ನೀವು ಒಪ್ಪಿಕೊಂಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 6) ಪ್ರಾಸಾ1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಮದ್ಯದ ಪ್ಯಾಕೇಟುಗಳನ್ನು ಕಾಫಿ ತೋಟದ ಬೇಲಿಯ ಬಳಿ ಇಟ್ಟಿರುವುದಾಗಿ ತಿಳಿಸಿ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅವರು ಕಾಫಿ ತೋಟದಲ್ಲಿ ಇಟ್ಟಿರುವ ಮದ್ಯದ ಪ್ಯಾಕೆಟ್‌ಗಳಿರುವ ಒಂದು ಬ್ಯಾಗನ್ನು ಹಾಜರುಪಡಿಸಿದಾಗ ಅದನ್ನು ಅವರು ಪರಿಶೀಲಿಸಿದಾಗ ಅದರಲ್ಲಿ ಮದ್ಯ ತುಂಬಿದ 90 ಎಂಎಲ್‌ನ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 48 ಮದ್ಯದ ಟೆಟ್ರಾ ಪ್ಯಾಕೇಟುಗಳು

ಇರುವುದು ಕಂಡು ಬಂದಿದ್ದು, ಸದರಿ ದಿನದಂದು ಮಾರಾಟ ಮಾಡಿ ಬಂದ ರೂ.700/- ನಗದು ಹಣವನ್ನು ಅವರು ಮುಂದೆ ಆರೋಪಿಯಾದ ನೀವು ಹಾಜರುಪಡಿಸಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ7) ಪ್ರಾಸಾ1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ-8 ರವರು ಅವರ ಹಾಗೂ ಪಂಚರ ಸಮಕ್ಷಮ ಮಹಜರು ಕ್ರಮ ಜರುಗಿಸಿ ಸದರಿ ಮದ್ಯದ ಟೆಟ್ರಾ ಪ್ಯಾಕೇಟುಗಳನ್ನು ಪ್ರತ್ಯೇಕವಾಗಿ ಬಿಳಿಯ ಬಟ್ಟೆಯಲ್ಲಿ ಹಾಕಿ ಹೊಲಿದು 'ಎಂ' ಎಂಬ ಅಕ್ಷರದಿಂದ ಸೀಲು ಮಾಡಿ ಸದರಿ ಮದ್ಯದ ಟೆಟ್ರಾ ಪ್ಯಾಕೇಟುಗಳು, ಅವುಗಳಿದ್ದ ಬ್ಯಾಗು ಹಾಗೂ ಆರೋಪಿಯಾದ ನೀವು ಹಾಜರುಪಡಿಸಿದ ರೂ.700/- ನಗದು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 8) ಪ್ರಾಸಾ1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಮಹಜರನ್ನು ಮದ್ಯಾಹ್ನ 12.30 ರಿಂದ 01.30 ಗಂಟೆಯವರೆಗೆ ಜರುಗಿಸಿದ ನಂತರ ಅಮಾನತ್ತು ಪಡಿಸಿಕೊಂಡು ಸ್ವತ್ತು ಹಾಗೂ ಆರೋಪಿಯಾದ ನಿಮ್ಮೊಂದಿಗೆ ಠಾಣೆಗೆ ಹಿಂತಿರುಗಿರುತ್ತಾರೆ. ನಂತರ ಈ ಎಲ್ಲಾ ಸಂಗತಿಗಳ ಬಗ್ಗೆ ಅವರು ದಿನಾಂಕ 12.04.2023 ರಂದು ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 9) ಪ್ರಾಸಾ2 ಬಸವರಾಜು.ಡಿ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 11-04-2023 ರಂದು ಬೆಳಿಗ್ಗೆ ಸುಮಾರು 11.45 ಗಂಟೆಗೆ ಅವರು ಠಾಣೆಯಲ್ಲಿ ಕರ್ತವ್ಯದಲ್ಲಿ ಇರುವಾಗ ಚಾಸಾ 8 ರವರು ಅವರನ್ನು, ಚಾಸಾ 1 ಹಾಗೂ 3 ರವರನ್ನು ಕರೆದು ಪ್ರಕರಣದ ವಿಚಾರವನ್ನು ತಿಳಿಸಿ ದಾಳಿಯ ಸಮಯದಲ್ಲಿ ಜೊತೆಯಲ್ಲಿ ಬರಬೇಕೆಂದು ತಿಳಿಸಿ ಅವರನ್ನು ಕರೆದುಕೊಂಡು ಠಾಣೆಯಿಂದ ಬೆಳಿಗ್ಗೆ ಸುಮಾರು 11.45 ಗಂಟೆಗೆ ಇಲಾಖೆ ಜೀಪಿನಲ್ಲಿ ಹೊರಟು ಚೆನ್ನಯ್ಯನ ಕೋಟೆ ಬಸ್ಸು ನಿಲ್ದಾಣಕ್ಕೆ ಹೋಗಿ ಅಲ್ಲಿ ಪಂಚರಾದ ಚಾಸಾ 4, 5 ರವರನ್ನು

ಬರಮಾಡಿಕೊಂಡು ಚಾಸಾ 8 ರವರು ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು ಅದಕ್ಕೆ ಅವರು ಒಪ್ಪಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 10) ಪ್ರಾಸಾ2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಚಾಸಾ 8 ರವರು ಅವರನ್ನು ಹಾಗೂ ಚಾಸಾ4 ಹಾಗೂ 5 ರವರನ್ನು ಕರೆದುಕೊಂಡು ಚೆನ್ನಯ್ಯನ ಕೋಟೆ ಗ್ರಾಮದ ಆರೋಪಿಯಾದ ನಿಮ್ಮ ಮನೆಯ ಬಳಿ ಹೋಗಿ ಜೀಪನ್ನು ನಿಲ್ಲಿಸಿದ್ದು, ಅಲ್ಲಿ ಆರೋಪಿಯಾದ ನೀವು ಮನೆಯ ಬಳಿ ನಿಂತಿದ್ದು, ನಂತರ ಚಾಸಾ 8 ರವರು ಆರೋಪಿಯಾದ ನಿಮಗೆ ಪ್ರಕರಣದ ವಿಚಾರವನ್ನು ತಿಳಿಸಿ ಮದ್ಯ ಮಾರಾಟದ ಬಗ್ಗೆ ವಿಚಾರಿಸಿದಾಗ ಆರೋಪಿಯಾದ ನೀವು ಮೊದಲು ಒಪ್ಪಿಕೊಂಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 11) ಪ್ರಾಸಾ2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಪುನಃ ವಿಚಾರಿಸಿದಾಗ ಮದ್ಯ ಮಾರಾಟ ಮಾಡುತ್ತಿದ್ದ ವಿಚಾರವನ್ನು ಒಪ್ಪಿಕೊಂಡು ಮದ್ಯದ ಪಾಕೆಟ್ ಗಳನ್ನು ಕಾಫಿ ತೋಟದ ಬೇಲಿಯ ಬಳಿ ಇಟ್ಟಿರುವುದಾಗಿ ತಿಳಿಸಿ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಅವರು ಕಾಫಿ ತೋಟದಲ್ಲಿ ಇಟ್ಟಿರುವ ಮದ್ಯದ ಪಾಕೆಟ್ ಗಳಿರುವ ಒಂದು ಬ್ಯಾಗನ್ನು ಹಾಜರುಪಡಿಸಿದ್ದು ಅದನ್ನು ಪಂಚರ ಸಮಕ್ಷಮ ಪರಿಶೀಲಿಸಲಾಗಿ ಅದರಲ್ಲಿ ಮದ್ಯ ತುಂಬಿದ 90 ಎಂ ಎಲ್ ನ ಒರಿಜಿನಲ್ ಚಾಯ್ಸ ಡಿಲಕ್ಸ್, ವಿಸ್ಕಿಯ 48 ಮದ್ಯದ ಟೆಟ್ರಾ ಪಾಕೆಟ್‌ಗಳಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 12) ಪ್ರಾಸಾ2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನಿಮ್ಮನ್ನು ವಿಚಾರಿಸಲಾಗಿ ಸದರಿ ದಿನದಂದು ಮದ್ಯ ಮಾರಾಟ ಮಾಡಿ ಬಂದ ರೂ. 700/- ನಗದು ಹಣವನ್ನು ನಮ್ಮ ಮುಂದೆ ಹಾಜರುಪಡಿಸಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 13) ಪ್ರಾಸಾ2-ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಅ ನಂತರ ಚಾಸಾ 8 ರವರು ಅವರು ಹಾಗೂ ಪಂಚರ ಸಮಕ್ಷಮ ಮಹಜರು ಕ್ರಮ ಜರುಗಿಸಿ ಸದರಿ ಮದ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಪ್ರತ್ಯೇಕವಾಗಿ ಬಿಳಿಯ ಬಟ್ಟೆಯಲ್ಲಿ ಹಾಕಿ ಹೊಲಿದು ' ಎಂ' ಎಂಬ ಅಕ್ಷರದಿಂದ ಸೀಲು ಮಾಡಿ ಸದರಿ ಮದ್ಯದ ಟೆಟ್ರಾ ಪ್ಯಾಕೆಟ್ ಗಳು, ಅವುಗಳಿದ್ದ ಬ್ಯಾಗ್ ಹಾಗೂ ಆರೋಪಿಯಾದ ನೀವು ಹಾಜರುಪಡಿಸಿದ ರೂ.700/- ನಗದು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 14) ಪ್ರಾಸಾ2-ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಮಹಜರನ್ನು ಮದ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ಚಾಸಾ 8 ರವರ ಉಕ್ತಲೇಖನದ ಮೇರೆಗೆ ಅವರು ಬರೆದು ಸಹಿ ಮಾಡಿದ ನಂತರ ಸದರಿ ಮಹಜರಿನ ಸಮಯದಲ್ಲಿ ಫೋಟೋ ಸಹ ತೆಗೆದು, ನಂತರ ಅಮಾನತ್ತುಪಡಿಸಿಕೊಂಡ ಸ್ವತ್ತು ಹಾಗೂ ಆರೋಪಿಯಾದ ನಿಮ್ಮೊಂದಿಗೆ ಠಾಣೆಗೆ ಹಿಂತಿರುಗಿದ ನಂತರ ದಿನಾಂಕ 12-04-2023 ರಂದು ಈ ಎಲ್ಲಾ ಸಂಗತಿಗಳ ಬಗ್ಗೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಆರೋಪಿಯ ಉತ್ತರಃ ಸುಳ್ಳು

ಪ್ರಶ್ನೆಃ 15) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ ?

ಆರೋಪಿಯ ಉತ್ತರಃ ಇಲ್ಲ

ಪ್ರಶ್ನೆಃ 16) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

ಆರೋಪಿಯ ಉತ್ತರಃ ಇಲ್ಲ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

ಸಹಿ/-

ಸ್ಥಳಃವಿರಾಜಪೇಟೆ. ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ದಿನಾಂಕಃ 25.06.2026. ನ್ಯಾಯಾಲಯ, ವಿರಾಜಪೇಟೆ.

ಆರೋಪಿಯ ಸಹಿ